## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 776 / 2021

ಸಿಡಬ್ಲ್ಯೂ- 08
ಪಿಡಬ್ಲ್ಯೂ-08

ದಿನಾಂಕಃ 27.03.2025.

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ರಾಜು |
| ತಂದೆಯ/ಗಂಡನ ಹೆಸರುಃ | - | ಪುರ್ಯಾ |
| ವಯಸ್ಸುಃ | -? | 30 ವರ್ಷ |
| ಉದ್ಯೋಗಃ | - | ಒಕ್ಕಲುತನ. |
| ವಾಸಸ್ಥಳಃ | - | ಅಲ್ಲಿಪೂರ ಗ್ರಾಮ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಚಾಸಾ-9 ರವರ ಪರಿಚಯ ನನಗೆ ಇರುತ್ತದೆ. ದಿನಾಂಕಃ 22.02.2021 ರಂದು ನಾನು ಮತ್ತು ಚಾಸಾ-9 ರವರು ಸೇರಿ ಅಲ್ಲಿಪೂರ ಗ್ರಾಮಕ್ಕೆ ಹೋಗುತ್ತಿದ್ದಾಗ ಕಂಚಗರಹಳ್ಳಿ ಗೇಟ್ ಹತ್ತಿರ ಅಪಘಾತ ಆಗಿದ್ದು ಅಲ್ಲಿ ಆಟೋದಲ್ಲಿ ಆಟೋ ಚಾಲಕ ಮತ್ತು ಎರಡು ಜನ ಹೆಣ್ಣು ಮಕ್ಕಳು ಪ್ರಯಾಣಿಸುತ್ತಿದ್ದರು. ಸದರಿ ಅಪಘಾತದಿಂದ ಆಟೋ ಪಲ್ಟಿಯಾಗಿತ್ತು. ಸದರಿ ಗಾಯಗಳುಗಳನ್ನು ನಾನು ವಿಚಾರಿಸಿದ್ದಾಗ ಅವರಲ್ಲಿ ಒಬ್ಬ ಭಾಗ್ಯಮ್ಮ ಚಾಸಾ-1 ಮತ್ತು ಇನ್ನೊಬ್ಬ ಚಾಸಾ-6 ನೀಲಮ್ಮ ಇದ್ದರು. ನಾವು ಅಲ್ಲಿಪೂರಕ್ಕೆ ಹೋಗುತ್ತಿದ್ದಾಗ ಆಟೋ ಯಾದಗಿರಿಗೆ ಬರುತ್ತಿತ್ತು ಆಗ ಕಲಬುರಗಿ ಕಡೆಯಿಂದ ಬುಲೆರೋ ಪಿಕ್‌ಪ್ ವಾಹನ ಬಂದು ಓವರ್ ಟೇಕ್ ಮಾಡುವಾಗ ಹಿಂದಿನಿಂದ ಬಂದು ಆಟೋಕ್ಕೆ ಜೋರಾಗಿ ಡಿಕ್ಕಿ ಪಡಿಸಿತ್ತು ಇದ್ದರಿಂದ ಆಟೋ ಪಲ್ಟಿಯಾಗಿತ್ತು ಅದರಲ್ಲಿ ಗಾಯಗಳು ಚಿರಾಡಿತ್ತಿದ್ದರು. ನಂತರ ನಾನು ಒಂದು ಆಟೋದಲ್ಲಿ ಗಾಯಗಳಾದ ಚಾಸಾ-1,6 ಮತ್ತು 7 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಬುಲೆರೋ ಪಿಕ್ ಆಪ್ ವಾಹನದ ನಂಬರ ನಾನು ನೋಡಿರುವುದಿಲ್ಲ. ಪ್ರಕರಣ ದಾಖಲು ಆದ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆದು ವಿಚಾರಣೆ ಮಾಡಿರುತ್ತಾರೆ. ಆಟೋಕ್ಕೆ ಡಿಕ್ಕಿಪಡಿಸಿದ ವಾಹನದ ಚಾಲಕನನ್ನು ನಾನು ಪೊಲೀಸ್ ಠಾಣೆಯಲ್ಲಿ

ನೋಡಿದ್ದೆ. ನಾನು ಪೊಲೀಸ್ ಠಾಣೆಯಲ್ಲಿ ನೋಡಿದ ವ್ಯಕ್ತಿಯು ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ವಿ.ಎಸ್.ಪಿ. ರವರಿಂದಃ

ಆರೋಪಿ ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ ಆದರೆ ಅವರು ಸಕಾರಣವನ್ನು ನೀಡಿರುವುದಿಲ್ಲ. ಆದ್ದರಿಂದ ಆತನ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.